ಎಸ್.ಸಿ. ಸಂಃ10001/2022
ಪಿಡಬ್ಲೂ- 8
ಸಿಡಬ್ಲೂ-12

ಪ್ರಮಾಣ ವಚನ ಭೋದಿಸಿದ ದಿನಾಂಕಃ 30-04-2024

<u>ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ</u>

ನನ್ನ ಮೇಲೆ ಒಂದು ಪೋಕ್ಸೋ ಕೇಸ್ ಇದೆ ಎಂದರೆ ಹೌದು. ನನ್ನ ಮೇಲೆ ಕ್ರಿಮಿನಲ್ ಕೇಸ್ ಹಾಕಿದಾಗ ಆರೋಪಿತರು ಸದರಿ ಕೇಸಿನಲ್ಲಿ ಪಿರ್ಯಾದುದಾರರಿಗೆ ಸಪೋರ್ಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ರಿಪ್ಪನ್ ಪೇಟೆಯಲ್ಲಿ ಚಿಕನ್ ವ್ಯಾಪಾರ ಮಾಡುತ್ತೇನೆ. ಗಣಪತಿ ಮೆರವಣಿಗೆಯಲ್ಲಿ ತುಂಬಾ ಜನ ಸೇರುತ್ತಾರೆ ಎಂದರೆ ಹೌದು. ಆ ಸಮಯದಲ್ಲಿ ಕತ್ತಲೆ ಆಗಿತ್ತು ಎಂದರೆ ಹೌದು. ಹಿಂದೂ ಮಹಾಸಭಾ ಗಣಪತಿ ಬಿಡುವ ಸಮಯದಲ್ಲಿ ಪೋಲೀಸರು ತುಂಬಾ ಜನ ಇದ್ದರು ಎಂದರೆ ಹೌದು. ಆ ಸಮಯದಲ್ಲಿ ಅಲ್ಲಲ್ಲಿ ಸಿ ಸಿ ಕ್ಯಾಮೆರಾ ಫಿಕ್ಸ್ ಮಾಡಿದ್ದಾಗೆ ಎಂದರೆ ಹೌದು. ಅಲ್ಲಿ ಏನಾದರೂ ಗಲಾಟೆ ಆದರೆ ಸಿ ಸಿ ಟಿ ವಿ ಮೂಲಕ

ಗೊತ್ತಾಗುತ್ತದೆ ಎಂದರೆ ಹೌದು. ಪೋಲೀಸರು ಮಹಜರ್ ನಲ್ಲಿ ಏನೆಲ್ಲ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮು ಮಾ-1 ಸಾಮಾನ್ಯವಾಗಿ ಚಿಕನ್ ಅಂಗಡಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಮು ಮಾ -1 ಕೋಳಿ ಜೂಜಾಟದ ಸಮಯದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಚಾಕು ಎಂದರೆ ಹೌದು. ಮು ಮಾ -1 ಸ್ಥಳದಲ್ಲಿ ಬಿದ್ದಿತ್ತು ನಾನೇ ಅದನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ. ಮು ಮಾ 4 ಹೊಸ ಚಾಕು ಎಂದರೆ ಸರಿಯಲ್ಲ. ಮು ಮಾ -1 ಹಾಗೂ ಮು ಮಾ -4 ರ ಮೇಲೆ ರಕ್ತದ ಕಲೆ ಇರುವುದಿಲ್ಲ. ಮು ಮಾ - 4 ಚಾಕುವನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ ಮು ಮಾ -4 ಕೆಳಗೆ ಬಿದ್ದಿತ್ತು. ಮು ಮಾ -4 ನ್ನು ಯಾರು ಪೋಲೀಸರಿಗೆ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಮು ಮಾ -1 ನೆಲದ ಮೇಲೆ ಬೇರೆ ಕಡೆ ಬಿದ್ದಿತ್ತು ಮತ್ತು ಮು ಮಾ -4 ಹುಲ್ಲಿನ ಮೇಲೆ ಬಿದ್ದಿತ್ತು. ಸದರಿ ಗಲಾಟೆಗೆ ರವಿ ಎಂಬುವವರ ಅಂಗಡಿಯ ಮುಂದೆ ಆಗಿದ್ದು ಸದರಿ ರವಿ ನನಗೆ ಪರಿಚಯ ಇರುತ್ತಾರೆ. ಸದರಿ ದಿನ ಅವರ ಅಂಗಡಿ ತೆರೆದಿತ್ತು ಎಂದರೆ ಹೌದು. ಗಲಾಟೆ ಸಮಯದಲ್ಲಿ ಅಕ್ಕಪಕ್ಕ ಇದ್ದ ಮನೆಯವರು ನನಗೆ ಪರಿಚಯ ಇರುತ್ತಾರೆ. ಗಲಾಟೆ ಸಮಯದಲ್ಲಿ ಚಾಸಾ-13 ಮತ್ತು ಚಾಸಾ - 14 ಗಲಾಟೆಯನ್ನು ಬಿಡಿಸಿರುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ 1ನೇ ಆರೋಪಿ ತೊಂದರೆ ಕೊಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ 1ನೇ ಆರೋಪಿ ಪ್ರಾ ಸಾ-1 ರವರೊಂದಿಗೆ ಜಗಳ ಮಾಡುತ್ತಿದ್ದ ಹಾಗೂ ಆತನಿಗೆ ಚಾಕು ಹಾಕಿರುತ್ತಾನೆ ಎಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ದಿನ ಗಣಪತಿ ಮೆರವಣಿಗೆಗೆ ನಾನು ಹೋಗಿಲ್ಲ, ಆರೋಪಿತರು ಯಾರೂ ಅಲ್ಲಿಗೆ ಬರಲಿಲ್ಲ, ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಪ್ರಾ ಸಾ -1 ನನ್ನ ಅಣ್ಣ. ಪ್ರಾ ಸಾ -1

ಮತ್ತು ನಾನು ಒಟ್ಟಿಗೆ ಇರುತ್ತೇವೆ. ಪೋಲೀಸರು ಜಾಗ ತೋರಿಸುವಂತೆ ನನಗೆ ನೋಟೀಸ್ ಕೊಟ್ಟಿದ್ದರು. ನೋಟೀಸ್ ಕೊಟ್ಟ ತಾರೀಖು ನೆನಪಿಲ್ಲ, ಒಂದು ವಾರ ಮುಂಚೆ ಕೊಟ್ಟಿದ್ದರು.

ನಾನು ಪ್ರಾ ಸಾ -1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ಪ್ರಾ ಸಾ -1 ರವರಿಗಾಗಲೀ ಬೇರೆಯವರಿಗಾಗಲೀ ಬೈದಿಲ್ಲ , ಆ ದಿನ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಾ ಸಾ - 1 ರವರಿಗೆ ಎಡ ಹೊಟ್ಟೆಗೆ ಪೆಟ್ಟಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ನಾನುಮತ್ತು ಪ್ರಾ ಸಾ -1 ರವರು ಸೇರಿ ಮು ಮಾ -1 ಮತ್ತು ಮು ಮಾ 4 ನ್ನು ಪೋಲೀಸರಿಗೆ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2ನೇ ಆರೋಪಿತನ ಪರ ವಕೀಲರಿಂದಃ</u>

2ನೇ ಆರೋಪಿ ಗಣಪತಿ ವಿಸರ್ಜನೆ ವೇಳೆ ಇರಲಿಲ್ಲ ಎಂದರೆ ಸರಿಯಲ್ಲ.ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಫೋಟೋ ತೆಗೆದಿಲ್ಲ , ಯಾವುದೇ ನಕ್ಷೆಯನ್ನು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿಯ ಊರು ಎಡೆಹಳ್ಳಿ ಆಗಿದ್ದು 10 ಕಿ ಮೀ ದೂರ ಇದೆ ಎಂದರೆ ಸರಿಯಲ್ಲ. 2ನೇ ಆರೋಪಿ ಯಾರಿಗೂ ಚಾಕು ಹಾಕಿಲ್ಲ ಗಲಾಟೆ ನಡೆಯಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4 ಆರೋಪಿತನ ಪರ ವಕೀಲರಿಂದಃ</u>

ಘಟನೆ ನಡೆದ ದಿನ ಸುಮಾರಾಗಿ ಮಳೆ ಬರುತ್ತಿತ್ತು. ಆ ದಿನ ನಾನು ಛತ್ರಿ ತೆಗೆದುಕೊಂಡು ಹೋಗಿದ್ದೆನು. ಆರೋಪಿತರು ಛತ್ರಿ ತೆಗೆದುಕೊಂಡು ಬಂದಿರಲಿಲ್ಲ. ಮೆರವಣಿಗೆ ನೋಡಲು ಬಂದ ಜನರಲ್ಲಿ ಕೆಲವರು ಛತ್ರಿ ತಂದಿದ್ದರು. 3 ಮತ್ತು 4ನೇ ಆರೋಪಿತರು ಯಾವ ರೀತಿ ಬಟ್ಟೆ ಧರಿಸಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿರಬಹುದು. ಸದರಿ ದಿನ ಬನ್ನಿ ನಗರ ಮಿಲ್ ಹತ್ತಿರ ಮೆರವಣಿಗೆ ಬರುತ್ತಿತ್ತು. ಸದರಿ ದಿನ ಮೆರವಣಿಗೆ ಹೇಗೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಮೆರವಣಿಗೆಯಲ್ಲಿ ಡೊಳ್ಳು ಕುಣಿತ ಮತ್ತು ಮ್ಯುಸಿಕ್ ಇತ್ತು. ಸದರಿ ಮೆರವಣಿಗೆಯಲ್ಲಿ 1500 ಜನ ಸೇರಿದ್ದರು. ಸದರಿ ಜನರು ನಮ್ಮ ಊರಿನವರು ಹಾಗೂ ಅಕ್ಕಪಕ್ಕದ ಊರಿನವರು. ಶಿವಮೊಗ್ಗ ಗಣಪತಿ ಬಿಟ್ಟರೆ ನಮ್ಮ ರಿಪ್ಪನ್ಪೇಟೆ ಗಣಪತಿ ಮೆರವಣಿಗೆಗೆ ಜಾಸ್ತಿ ಜನ ಸೇರುತ್ತಾರೆ ಎಂದರೆ ಹೌದು. ನಾನು ಪ್ರತಿವರ್ಷ ಹೋಗುತ್ತೇನೆ. ಅಲ್ಲಿ ಡ್ಯಾನ್ಸ್ ಮಾಡುತ್ತೇವೆ ಎಂದರೆ ಹೌದು. ಪೋಲೀಸರು ಒಂದು ಸಲ ಗಸ್ತು ಮಾಡಿದ ನಂತರ ಮೆರವಣಿಗೆ ಶುರು ಆಗುತ್ತದೆ ಎಂದರೆ ಹೌದು. ಪ್ರತಿಯೊಂದು ಸರ್ಕಲ್ ಬಳಿ ಪೋಲೀಸರು 3-4 ಜನ ಅಲ್ಲಲ್ಲಿ ಇರುತ್ತಾರೆ ಎಂದರೆ ಹೌದು. ಆ ಸಮಯದಲ್ಲಿ ಪೋಲೀಸರು ವೀಡಿಯೋ ಮಾಡುತ್ತಾರೆ ಎಂದರೆ ಹೌದು.

ಘಟನೆ ದಿನ ಪೋಲೀಸರು ವೀಡಿಯೋ ಮಾಡಿರುತ್ತಾರೆ. ಮೆರವಣಿಗೆ ಸಮಯದಲ್ಲಿ ಕೆಲವು ಪೋಲೀಸರು ನಡೆದುಕೊಂಡು ಬರುತ್ತಾರೆ ಎಂದರೆ ಹೌದು. ಆ ಸಮಯದಲ್ಲಿ ಪೋಲೀಸರು ಮಳೆಯಲ್ಲಿ ನೆನೆದುಕೊಂಡು ಬರುತ್ತಿದ್ದರು. ಆಗ ಸಂಜೆ ಸುಮಾರು 6-30 ರಿಂದ 6-45 ಗಂಟೆ ಆಗಿತ್ತು. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟ ದಿನಾಂಕ ನೆನಪಿಲ್ಲ ಆದರೆ ಘಟನೆ ನಡೆದ ದಿನ ರಾತ್ರಿ 10-00 — 10-30 ಗಂಟೆ ಸಮಯದಲ್ಲಿ ಕೊಟ್ಟಿರುತ್ತೇನೆ. ಹೇಳಿಕೆಗೆ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ. ಘಟನಾ ಸ್ಥಳದಿಂದ ಸರ್ಕಾರಿ ಆಸ್ಪತ್ರೆ ಅರ್ಧ ಕಿ ಮೀ ದೂರ ಇರುತ್ತದೆ. ಆ ದಿನ ನಾವು ಸರಕಾರಿ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ವಾಹನ ಸೇರಿದ್ದ ಕಾರಣ ಆಸ್ಪತ್ರೆಗೆ ಪ್ರಾ ಸಾ -1 ರವರನ್ನು ಎತ್ತಿಕೊಂಡು ಹೋಗಿರುತ್ತೇವೆ. ಚಾಸಾ10 ಕುಮಾರ ನಡೆದುಕೊಂಡು ಆಸ್ಪತ್ರೆಗೆ

ಬಂದಿರುತ್ತಾನೆ. ಆತನನ್ನು ನಾನೇ ಕರೆದುಕೊಂಡು ಹೋಗಿರುತ್ತೇನೆ. ರಾತ್ರಿ 7-30 – 8-00 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ಪೋಲೀಸರು ಆಸ್ಪತ್ರೆಗೆ ಬಂದಿದ್ದು ಅವರು ನನ್ನನ್ನು ವಿಚಾರ ಮಾಡಿರುವುದಿಲ್ಲ.

4ನೇ ಆರೋಪಿಯು ಏನು ಕೆಲಸ ಮಾಡುತ್ತಾನೆ ಎಂಬ ಬಗ್ಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಆ ದಿನ 4ನೇ ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಯರದ್ದೋ ಮಾತು ಕೇಳಿ 4ನೇ ಆರೋಪಿ 1ನೇ ಆರೋಪಿಯ ಸ್ನೇಹಿತ ಎಂಬ ಕಾರಣಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ನನ್ನ ಅಕ್ಕನನ್ನು ಪ್ರೀತಿಸುತ್ತಿದ್ದ ಎನ್ನುವ ಒಂದೇ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ನನ್ನ ಅಕ್ಕನನ್ನು ಹಿಂಬಾಲಿಸುತ್ತಿದ್ದ, ಆಕೆಗೆ ತೊಂದರೆ ಕೊಡುತ್ತಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಘಟನಾ ಸ್ಥಳದಲ್ಲಿ ಇದ್ದದ್ದಾಗಲೀ, ಆರೋಪಿತರನ್ನು ನೋಡಿದ್ದಾಗಲೀ ಸುಳ್ಳು ಎಂದರೆ ಸರಿಯಲ್ಲ. ನನ್ನ ಕೋಳಿ ಅಂಗಡಿಯಲ್ಲಿರುವ ನನ್ನದೇ ಚಾಕು ಮು ಮಾ -1 ಮತ್ತು ಮು ಮಾ -4 ನ್ನು ಪೋಲಿಸೆರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಿಕನ್ ಅಂಗಡಿಯಲ್ಲಿ ಕೋಳಿಯನ್ನು ಕಟ್ ಮಾಡುವಾಗ ಕೋಳಿಯ ರಕ್ತದ ಕಲೆ ಬಟ್ಟೆಗೆ ಹಾರುತ್ತದೆ ಎಂದರೆ ಹೌದು. ಪೋಲೀಸರಿಗೆ ನನ್ನ ಚಿಕನ್ ಅಂಗಡಿಯಲ್ಲಿ ರಕ್ತದ ಕಲೆ ಆದ ಬಟ್ಟೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ರಿಪ್ಪನ್ ಪೇಟೆ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ನಂತರ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ  ಹೆಚ್ಚಿನ ಚಿಕಿತ್ಸೆಗಾಗಿ ಹೋಗಿರುತ್ತೇವೆ. ರಾತ್ರಿ 8-00 – 8-20 ಗಂಟೆಗೆ ಮೆಗ್ಗಾನ್ ಆಸ್ಪತ್ರೆಗೆ ಹೋಗಿರುತ್ತೇವೆ. ನಮ್ಮ ಮನೆ ಶಿವಮಂದಿರಕ್ಕೆ ಸುಮಾರು ಅರ್ಧ ಕಿ ಮೀ ದೂರ ಇದೆ. ನಡೆದುಕೊಂಡು ಹೋದರೆ 10 ನಿಮಿಷ ಆಗುತ್ತದೆ. ಶಿವಮಂದಿರ ಗಣಪತಿ ದೇವಸ್ಥಾನದ ಎದುರು

ಇದೆ ಎಂದರೆ ಸರಿಯಲ್ಲ. ರವಿ ಪ್ರಾವಿಸನ್ ಸ್ಟೋರ್ ಆ ದಿನ ಬಾಗಿಲು ತೆರೆದಿತು. ರವಿ ಪ್ರಾವಿಸನ್ ಸ್ಟೋರ್ ಬಳಿ ಗಣಪತಿ ಮೆರವಣಿಗೆ ಬಂದಾಗ ಸಂಜೆ 6-40 ಗಂಟೆ ಆಗಿತ್ತು.

ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರಾ ಸಾ -1 ರವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾ ಸಾ -1 ರಿಪ್ಪನ್ ಪೇಟೆ ಆಸ್ಪತ್ರೆಗೆ ಹೋದಾಗ ಎಚ್ಚರ ಇದ್ದನು. ಶಿವಮೊಗ್ಗಕ್ಕೆ ಹೋಗುವಾಗ ಪ್ರಾ ಸಾ -1 ಎಚ್ಚರ ಇದ್ದರು. ವೈಯಕ್ತಿಕ ದ್ವೇಷಕ್ಕೋಸ್ಕರ ನಾನು ಮತ್ತು ಪ್ರಾ ಸಾ -1 ರವರು ಆರೋಪಿತರ ವಿರುದ್ದ ಸುಳ್ಳು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು ಮಾ -1 ಮತ್ತು ಮು ಮಾ -4 ರ ಮೇಲೆ ಪೋಲೀಸರು ನನ್ನ ಸಹಿ ಪಡೆಯಲಿಲ್ಲ.

<u>ಪಾಟೀ ಸವಾಲುಃ 3 ನೇ ಆರೋಪಿತನ ಪರ ವಕೀಲರಿಂದಃ</u>

3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).